ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1586/2024

| | | | |
|---|---|---|---|
| ಹೆಸರು | : | ಸುನಿಲ್ ಕುಮಾರ್ ಜೆ.ಕೆ. | ಸಿ .ಡಬ್ಲ್ಯೂ :1 |
| ತಂದೆ ಹೆಸರು | : | ಕೃಷ್ಣಮೂರ್ತಿ | ಪಿ .ಡಬ್ಲ್ಯೂ :1 |
| ವಯಸ್ಸು | : | 37 ವರ್ಷ | |
| ಉದ್ಯೋಗ | : | PSI Gubbi | |
| ವಾಸಸ್ಥಳ | : | Gubbi | |

ಸಾಕ್ಷಿಯನ್ನು ದಿಃ 17-03-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ13.32024 ರಿಂದ ಇಲ್ಲಿಯವರೆಗೆ PSI ಆಗಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ .

ದಿಃ 27-03-2024 ಮಧ್ಯಾಹ್ನ 2.00 ಗಂಟೆ ಸಮಯದದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಬಾಗೂರು ಗೇಟ್ ಬಳಿ ಗಂಗಾಣಮ್ಮ ರವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ದಾಸ್ತಾನು ಮಾಡಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದಿತ್ತು . ಆ ನಂತರ ನಾನು ಚಾಸಾ -4 ಮತ್ತು 5 ರವರೊಡನೆ ಸದರಿ ಸ್ಥಳದ ಕಡೆಗೆ ಹೋಗಿದ್ದ ಸ್ವಲ್ಪ ದೂರದಲ್ಲಿ ಜೀಪು ನಿಲ್ಲಿಸಿ ಮರೆಯಲ್ಲಿ ನಿಂತು ನೋಡಲಾಗಿ ಸದರಿ ಆರೋಪಿತರು ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿತ್ತು . ನಮ್ಮನ್ನು ನೋಡಿದ ಕೂಡಲೇ ಆರೋಪಿತರು ಅಂಗಡಿಯಲ್ಲಿ ಇಟ್ಟುಕೊಂಡಿದ್ದ ಹಳದಿ ಬಣ್ಣದ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಲು ಪ್ರಯತ್ನಿಸಿದರು . ನಾವು ಆಕೆಯನ್ನು ಸುತ್ತುವರೆದು ಅಲ್ಲಿಯೇ ನಿಲ್ಲುವಂತೆ ಹೇಳಿದೆವು .ನಾನು ಆಕೆಯನ್ನು ಪ್ರಶ್ನಿಸಲಾಗಿ ಆಕೆಯು ಸಮಾರು 15 ಲೀಟರ್ ಮದ್ಯವನ್ನು ಮಾರಾಟ ಮಾಡುವ ಸಲುವಾಗಿ ತಂದಿರುವುದಾಗಿ ತಿಳಿಸಿದರು . ತನ್ನ ಬಳಿ ಮದ್ಯ ಮಾರಾಟ ಮಾಡಲು ಪರವಾನಗಿ ಇಲ್ಲವೆಂದು ತಿಳಿಸಿದರು . ಸ್ಥಳದಲ್ಲಿಯೇ ದೂರುವೊಂದನ್ನು ತಯಾರಿಸಿ ಚಾಸಾ -5 ರವರ ಮೂಲಕ ಠಾಣೆಗೆ ಕಳುಹಿಸಿಕೊಟ್ಟಿದ್ದೇನೆ . ಮಧ್ಯಾಹ್ನ 3.00 ಗಂಟೆ ವೇಳೆಗೆ ಪ್ರಕರಣ ದಾಖಲಾಗಿರುವ ವಿಚಾರವನ್ನು ಚಾಸಾ -5 ರವರು ನನಗೆ ತಿಳಿಸಿದರು .

ಚಾಸಾ -2 ಮತ್ತು 3 ರವರಿಗೆ ನೋಟಿಸ್ ನೀಡಿ ಪ್ರಕರಣದ ಸಂಬಂಧ ಪಂಚರಾಗಿರುವಂತೆ ಕೋರಿದ್ದೇನೆ . ಅವರು ಒಪ್ಪಿಕೊಂಡ ನಂತರ ನಾನು ಠಾಣೆಯಿಂದ ಚಾಸಾ -6 ಮತ್ತು ನಟರಾಜು ಎಂಬ ಸಿಬ್ಬಂದಿಯವರನ್ನು ಸ್ಥಳಕ್ಕೆ ಕರೆಸಿಕೊಂಡಿದ್ದೇನೆ . ಚಾಸಾ -2 ಮತ್ತು 3 ರವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಮಧ್ಯಾಹ್ನ 3.00 ರಿಂದ 4.00 ಗಂಟೆಯವರೆಗೆ ಮಹಜರು ಕ್ರಮ ಕೈಗೊಂಡಿದ್ದೇನೆ . ಆರೋಪಿತರ ಬಳಿ ಇದ್ದ ಹಳದಿ ಬಣ್ಣದ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿ 90ML ನ Haywards whiskey 120

ಪೌಚುಗಳು ಲಭ್ಯವಾದವು . ಅದು ಒಟ್ಟು 10.8 ಲೀಟರ್ ಮದ್ಯವಾಗಿತ್ತು . ಒಂದು ಪೌಚ್ ನ ಬೆಲೆ 40.01 ರೂ ಆಗಿತ್ತು . 120 ಪೌಚುಗಳ ಒಟ್ಟು ಬೆಲೆ 4801/- ರೂ ಆಗಿತ್ತು . 90 ML OC whiskey 28 ಪೌಚುಗಳು ಸಹಾ ಇದ್ದವು . ಅದು ಒಟ್ಟು 2.52 ಲೀಟರ್ ಇತ್ತು . 90ML Raja whiskey 16 ಪೌಚುಗಳು ಇದ್ದವು . ಅದು ಒಟ್ಟು 1.44 ಲೀಟರ್ ಇತ್ತು . 180 ML ನ BP Whiskey 3 ಪೌಚುಗಳು ಇದ್ದವು. ಅದು ಒಟ್ಟು 500ML ಇತ್ತ. ಎಲ್ಲವೂ ಸೇರಿ ಒಟ್ಟು 167 ಪೌಚುಗಳಿದ್ದವು . ಅವುಗಳನ್ನು ಹಾಗೂ ಅವುಗಳನ್ನು ಇಡಲಾಗಿದ್ದ ಹಳದಿ ಚೀಲವನ್ನು ಪಂಚನಾಮೆಯಡಿಯಲ್ಲಿ ವಶಕ್ಕೆ ಪಡೆದಿದ್ದೇನೆ . ಜಪ್ತು ಮಾಡಿದ ಮದ್ಯವನ್ನು FSL ಗೆ ಕಳುಹಿಸುವ ಸಲುವಾಗಿ Haywards whiskey 10 ಪೌಚುಗಳನ್ನು , OC 5 ಪೌಚುಗಳನ್ನು , Raja whiskey 6 ಪೌಚುಗಳನ್ನು , BP Whiskey 3 ಪೌಚುಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿಯ ಚೀಲವೊಂದರಲ್ಲಿ ಹಾಕಿ ಹೊಲೆದು S ಅಕ್ಷರದಿಂದ ಸೀಲ್ ಮಾಡಲಾಯಿತು . ಉಳಿದ ಮದ್ಯದ ಪೌಚುಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ಅಬಕಾರಿ ಇಲಾಖೆಗೆ ಹಸ್ತಾಂತರಿಸುತ್ತೇವೆ ಎಂದು ಪಂಚರಿಗೆ ತಿಳಿಸಿದ್ದೇನೆ . ಆರೋಪಿತರ ಅಂಗಡಿ ಮರದ ಪೆಟ್ಟಿಗೆಯ ಅಂಗಡಿಯಾಗಿರುತ್ತದೆ . ಆರೋಪಿತರಿಗೆ ಸ್ಥಳದಲ್ಲಿಯೇ ನೋಟಿಸ್ ಒಂದನ್ನು ಜಾರಿಗೊಳಿಸಿ ಆರೋಪಿತರನ್ನು ಮತ್ತು ಅವರಿಂದ ವಶಕ್ಕೆ ಪಡೆದ ಮದ್ಯವನ್ನು ಮುಂದಿನ ಕ್ರಮಕ್ಕಾಗಿ ಚಾಸಾ -8 ರವರ ಸಮಕ್ಷಮ ಹಾಜರಪಡಿಸಿದ್ದೇನೆ .

ಸಾಕ್ಷಿಗೆ ದೂರು ಮತ್ತು ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅವುಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿದ್ದಾರೆ ಅವುಗಳನ್ನು ನಿಪಿ -1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ -1 (ಎ) ಮತ್ತು 2 (ಎ) ಎಂದು ಗುರುತಿಸಲಾಯಿತು . ಸಾಕ್ಷಿಯು ಆರೋಪಿತರಿಗೆ ನೀಡಲಾಗಿದ್ದ ನೋಟಿಸ್ ನ್ನು ಗುರುತಿಸಿದ್ದು ಅದನ್ನು ನಿಪಿ -3 ಎಂದು ಸಾಕ್ಷಿ ಸಹಿಯನ್ನು ನಿಪಿ -3 (ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯ ತೆಗೆದ ಛಾಯಾ ಚಿತ್ರಗಳೆಂದು ಸಾಕ್ಷಿಯು ಎರಡು ಛಾಯಾ ಚಿತ್ರಗಳನ್ನು ಗುರುತಿಸಿದ್ದಾರೆ (ಭಾರತ ಸಾಕ್ಷ್ಯ ಅಧಿನಿಯಮ ಕಲಂ 65 (ಬಿ) ರಡಿಯಲ್ಲಿ ಪ್ರಮಾಣ ಪತ್ರವನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಿಲ್ಲದ ಕಾರಣ ಛಾಯಾಚಿತ್ರಗಳನ್ನು ನಿಶಾನೆಗಳಾಗಿ ಗುರುತಿಸಿಲ್ಲ)

ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಸೀಲ್ ಮಾಡಿದ 24 ಖಾಲಿ ಪೌಚುಗಳನ್ನು ಗುರುತಿಸಿದ್ದಾರೆ ಅವುಗಳನ್ನುಒಟ್ಟಾಗಿ ಮು ಮಾ -1 ಎಂದು ಗುರುತಿಸಲಾಯಿತು . ಸಾಕ್ಷಿಗೆ ಹಳದಿ ಚೀಲವನ್ನು ಗುರುತಿಸಿದ್ದು ಮುಮಾ 1 (ಎ) ಗುರುತಿಸಲಾಯಿತು . ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎರಡು ಛಾಯಾ ಚಿತ್ರಗಳಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಮದ್ಯದ ಪೌಚುಗಳನ್ನು ಇಟ್ಟಿರುವುದು ಕಂಡುಬರುತ್ತಿದೆ ಎಂದರೆ ಸರಿ . ಸದರಿ ಛಾಯಾ ಚಿತ್ರಗಳಲ್ಲಿ ಹಳದಿ ಚೀಲ ಕಂಡುಬರುತ್ತಿಲ್ಲ ಎಂದರೆ

ಸರಿಯಲ್ಲ . ಛಾಯಾ ಚಿತ್ರಗಳಲ್ಲಿ ಕಂಡುಬರುತ್ತಿರುವ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ . ಛಾಯಾ ಚಿತ್ರವೊಂದರಲ್ಲಿ ತನಿಖೆ ಸಹಾಯಕರಾದ ನಟರಾಜು ರವರು ಕಂಡುಬರುತ್ತಿದ್ದಾರೆ ಎಂದರೆ ಸರಿ . ಸ್ಥಳದಲ್ಲಿ ದೂರನ್ನು ಲ್ಯಾಪ್ ಟಾಪ್ ನ ಸಹಾಯದಿಂದ ಬೆರಳಚ್ಚು ಮಾಡಿಸಿದ್ದೇನೆ . ನಮ್ಮ ಬಳಿ ಇದ್ದ ಪೋರ್ಟೆಬಲ್ ಪ್ರಿಂಟರ್ ನ ಮೂಲಕ ಜೀಪ್ ಬ್ಯಾಟರಿ ಸಹಾಯದಿಂದ ಮುದ್ರಿಸಿದ್ದೇನೆ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೇಲೆ ಹೇಳಿದ ಸ್ಥಳದಲ್ಲಿ ಮದ್ಯವನ್ನು ಖರೀದಿಸಲು ಯಾರೂ ಸಾರ್ವಜನಿಕರು ಇರಲಿಲ್ಲ . ಅಂಗಡಿ ಯಾರಿಗೆ ಸೇರಿದ್ದು ಎಂಬ ಬಗ್ಗೆ ಪಂಚನಾಮೆಯ ಸಮಯ ಪರಿಶೀಲಿಸಿದ್ದೇನೆ, ದಾಖಲೆಗಳನ್ನು ಪಡೆದುಕೊಂಡಿಲ್ಲ . ಪಂಚನಾಮೆಗೆ ಚಾಸಾ - 5 ರವರ ಸಹಿ ಪಡೆದುಕೊಂಡಿಲ್ಲ . ಚಾಸಾ -4 ರವರು ಪಂಚನಾಮೆ ಬೆರಳಚ್ಚು ಮಾಡಿದ್ದಾರೆ ಮತ್ತು ಸಹಿ ಮಾಡಿದ್ದಾರೆ . ನಾನಾಗಲೀ ನಮ್ಮ ಸಿಬ್ಬಂದಿಯಾಗಲೀ ಮೇಲೆ ಹೇಳಿದ ಸ್ಥಳಕ್ಕೆ ಹೋಗಿಲ್ಲ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ದೊರೆತ ಮದ್ಯದ ಪೌಚುಗಳಿಗೆ ಕ್ರಮ ಸಂಖ್ಯೆಯನ್ನು ನೀಡಿಲ್ಲ . ನಾನು ಹೇಳುವಂತೆ ಆರೋಪಿತರು ಅಕ್ರಮ ಮದ್ಯ ಹೊಂದಿರಲಿಲ್ಲ ಮತ್ತು ಮಾರಾಟ ಮಾಡಲು ಸಹಾ ಪ್ರಯತ್ನಿಸಿಲ್ಲ , ಅವರ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಗಳ ಹೆಚ್ಚುವರಿಗಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಮುಮಾ 1 ಮತ್ತು ಮು ಮಾ 1 (ಎ) ಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕಾಗಿ ಮುಮಾ 1 ಮತ್ತು ಮು ಮಾ 1 (ಎ) ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.